1994ನೇ ಸಾಲಿನ ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಖಾಯಂಗೊಳಿಸುವುದು

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೇ, 1994ನೇ ಸಾಲಿನಲ್ಲಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿ ವೃಂದದ ಸುಮರು 20ಕ್ಕಿಂತಲೂ ಹೆಚ್ಚು ಅಭ್ಯರ್ಥಿಗಳನ್ನು ಈವರೆಗೆ ಖಾಯಂಗೊಳಿಸಿಲ್ಲ. ನಿಗದಿಪಡಿಸಿರುವ ಮಿತಿಗಿಂತ ಆದಾಯ ಹೆಚ್ಚಾಗಿದೆ ಎಂದು ಆದಾಯ ದೃಢೀಕರಣ ಮತ್ತು ವಿವರಣೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕರಣ ಪತ್ರ ಬಂದಿಲ್ಲ ಎನ್ನುವ ಕಾರಣದಿಂದ 1994ನೇ ಸಾಲಿನಲ್ಲಿ ನೇಮಕಾತಿ ಹೊಂದಿದ ಶಿಕ್ಷಕರನ್ನು ಖಾಯಂಗೊಳಿಸಿಲ್ಲ. ಈ ಬಗ್ಗೆ ಈ ಹಿಂದೆ ಕೂಡ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದಾಗ, ಶಿಕ್ಷಕರಿಗೆ ವೇತನವನ್ನು ಕೊಡದೇ ಇರುವುದು ಸರಿಯಲ್ಲ ಎಂದು ಮಾನ್ಯ ಶಿಕ್ಷಣ ಸಚಿವರು ವೇತನ ಕೊಡುವ ಬಗ್ಗೆ ಮತ್ತು ಅವರನ್ನು ಖಾಯಂ ಮಾಡುವ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೂ ಇದುವರೆಗೂ ಏನೂ ಪ್ರಯೋಜನವಾಗಿಲ್ಲ. 1994ನೇ ಸಾಲಿನಲ್ಲಿ ಶಿಕ್ಷಕರ ನೇಮಕಾತಿ ಆದೇಶವನ್ನು ಕೊಡುವ ಮೊದಲು ಆದಾಯ, ಜಾತಿ ಪಂಗಡಗಳ ಬಗ್ಗೆ ಸಂಬಂಧಪಟ್ಟಂಥ ಅಧಿಕಾರಿಗಳಿಂದ ಪ್ರಮಾಣಪತ್ರವನ್ನು ಪಡೆದಿದ್ದರೆ ಈ ತೊಂದರೆ ಸದರಿ ಶಿಕ್ಷಕರಿಗೆ ಆಗುತ್ತಿರಲಿಲ್ಲ. 1994ನೇ ಸಾಲಿನ ನೇಮಕಾತಿಯ ನಂತರ, ಶಿಕ್ಷಕರಿಗೆ ನೇಮಕಾತಿ ಆದೇಶ ಕೊಡುವ ಮೊದಲು ಸಂಬಂಧಪಟ್ಟ ಅಧಿಕಾರಿಗಳಿಂದ ಪ್ರಮಾಣ ಪತ್ರ ಕೊಡುವ ಪದ್ಧತಿ ಇರುತ್ತದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಸೂಕ್ತ ರೀತಿಯಲ್ಲಿ ಗಮನ ಹರಿಸಿ ಸದರಿ ಶಿಕ್ಷಕರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ನಂತರ ಉತ್ತರವನ್ನು ಕೊಡುತ್ತೇನೆ.

ಕೋಲಾರ ಜಿಲ್ಲೆಯಲ್ಲಿರುವ ಕೆಎಸ್ ಆರ್ ಟಿಸಿಯ ಡಿವಿಷನ್ ಕಂಟ್ರೋಲರ್‌ರವರ ವರ್ತನೆ ಬಗ್ಗೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ನಮ್ಮ ಕೋಲಾರ ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಗೆ ಒಬ್ಬ ಡಿವಿಷನಲ್ ಕಂಟ್ರೋಲರ್ ಇದ್ದಾರೆ. ನಮ್ಮ ಜಿಲ್ಲೆಯ ಹಳ್ಳಿಗಾಡಿನ ಪ್ರದೇಶಗಳಲ್ಲಿ ಬಸ್ಸುಗಳನ್ನು ಓಡಿಸಬೇಕು. ಎಲ್ಲಾ ಹಳ್ಳಿಗಳಿಗೂ ಬಸ್ಸಿನ ಸೌಕರ್ಯವನ್ನು ಒದಗಿಸಬೇಕು ಮತ್ತು ಅದರ ಉಸ್ತುವಾರಿಯನ್ನು ನೋಡಿಕೊಳ್ಳಲು ಅವರನ್ನು ನಮ್ಮ ಜಿಲ್ಲೆಯ ಡಿವಿಷನಲ್ ಕಂಟ್ರೋಲರ್‌ಆಗಿ ಇಟ್ಟಿರತಕ್ಕಂಥಾದ್ದು. ಆದರೆ ಅಲ್ಲಿರತಕ್ಕಂಥ ಕರಿಂಬಯ್ಯ ಎನ್ನುವ ಆ ಡಿವಿಷನಲ್ ಕಂಟ್ರೋಲರ್ ಕೋಲಾರ ಜಿಲ್ಲೆಯಲ್ಲಿರುವ ಹಳ್ಳಿಗಳಿಗೆ ಬಸ್ಸುಗಳನ್ನು ಹಾಕುವುದರ ಬದಲು, ಕೊಡಗಿಗೆ ಹೆಚ್ಚು ಬಸ್ಸುಗಳನ್ನು ಹಾಕಿದ್ದಾರೆ. ಕಾರಣ ಆತ ಕೊಡಗು ಜಿಲ್ಲೆಯವನು. ನಮ್ಮ ಕೋಲಾರ ಡಿಪೋದಿಂದ, ಕೆಜಿಎಫ್ ಡಿಪೋದಿಂದ ಮತ್ತು ಚಿಕ್ಕಬಳ್ಳಾಪುರ ಡಿಪೋದಿಂದ ಕೊಡಗಿಗೆ 20 ಬಸ್ಸುಗಳನ್ನು ಹಾಕಿದ್ದಾರೆ. ಎಲ್ಲೆಲ್ಲಿಗೆ ಹಾಕಿದ್ದಾರೆ ಎನ್ನುವ ಪಟ್ಟಿಯನ್ನು ನಾನು ಹೇಳುತ್ತೇನೆ. ಭಾಗಮಂಡಲ, ಮಡಿಕೇರಿ, ತಲಕಾವೇರಿ, ಸೋಲಂಪಟ್ಟಣ, ವಿರಾಜಪೇಟೆ, ಸೋಮವಾರಪೇಟೆ, ಶನಿವಾರ ಸಂತೆ ಹೀಗೆ ಒಂದು ಘಟಕಕ್ಕೆ ಸುಮಾರು 10 ಗಾಡಿಗಳಂತೆ 40 ವಾಹನಗಳನ್ನು ಕೋಲಾರ ಜಿಲ್ಲೆಯಿಂದ ಕೊಡಗು ಜಿಲ್ಲೆಗೆ ಓಡಿಸುತ್ತಿದ್ದಾರೆ. ತಿರುಪತಿಗೆ ಹೆಚ್ಚು ಬಸ್ಸುಗಳನ್ನು ಹಾಕಿದರೆ ಅದನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ.